# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರವರಕಛೇರಿ, ಕೆಂಪೇಗೌಡ ಪೌರ ಸಭಾಂಗಣ, ನರಸಿಂಹರಾಜ ಚೌಕ, ಬೆಂಗಳೂರು-560002.
ದೂರವಾಣಿ:080-2297550/22221286, ಫ್ಯಾಕ್ಸ್: 080-22223194, ಇ-ಮೇಲ್:comm@bbmp.gov.in

ಸಂಖ್ಯೆ:ಕೌಕಾ/ಜಿಪಿಎಲ್/ಪಿಆರ್/198/2019-20 ದಿನಾಂಕ: 07 -03 -2020

## ತಿಳುವಳಿಕೆ ಪತ್ರ

ವಿಷಯ: ವಾರ್ಡ್ ಸಮಿತಿ ಸಭೆಗಳನ್ನು ಕಡ್ಡಾಯವಾಗಿ ನಡೆಸುವ ಬಗ್ಗೆ

ಉಲ್ಲೇಖ: (1) ಈ ಕಛೇರಿ ಪತ್ರ ಸಂಖ್ಯೆ: ಕೌಕಾ/ಜಿಪಿಎಲ್/ಪಿಆರ್/198/2019-20 ದಿ: 15-10-2019

(2) ಆಯುಕ್ತರು, ಬಿಬಿಎಂಪಿ ರವರಆಂತರಿಕಕಛೇರಿಟಿಪ್ಪಣಿ ಸಂಖ್ಯೆ ಬಿಬಿಎಂಪಿ/ಆ/ಪಿಆರ್/ 4493/3/2019-20 ದಿನಾಂಕ 07-09-2019.

(3)ಈ ಕಛೇರಿಯ ಸಮಸಂಖ್ಯೆ: ಕೌಕಾ/ಜಿಪಿಎಲ್/ಪಿಆರ್/198/2019-20.ದಿನಾಂಕ:03-02-2020.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಪ್ರತಿ ಮಾಹೆಯಾನ ದಿನಾಂಕ 25ರೊಳಗಾಗಿ ವಾರ್ಡ್ ಸಮಿತಿ ಸಭೆಯನ್ನು ನಡೆಸಿ, ಸಭಾ ನಡವಳಿಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸಹ ಈಗಾಗಲೇ ಉಲ್ಲೇಖ (1)ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ. ಹೀಗಾಗಿಯೂ ಹಲವಾರು ವಾರ್ಡ್‌ಗಳಲ್ಲಿ ನಿಗದಿತ ಅವಧಿಯೊಳಗೆ ಸಭೆಗಳನ್ನು ನಡೆಸದಿರುವುದು ವಿಷಾದನೀಯವಾಗಿರುತ್ತದೆ.

ಉಲ್ಲೇಖ (2)ರ ದಿನಾಂಕ 07-09-2019ರ ಪತ್ರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಡಬ್ಲ್ಯೂಪಿ ನಂ.42927/2015ರಲ್ಲಿ ನ್ಯಾಯಲಯವು ಸೂಚಿಸಿರುವಂತೆ ವಾರ್ಡ್ ಕಮಿಟಿ ಸಭೆಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಗಳಿಗೆ ಆದ್ಯತೆ ನೀಡುವುದು ಹಾಗೂ ಪರಿಶೀಲಿಸುವುದು, ವಸ್ತುಸ್ಥಿತಿ ವರದಿಯನ್ನು ಸಹ ಪರಿಶೀಲಿಸಿಕೊಂಡು ವಾರ್ಡ್ ಸಮಿತಿಯಲ್ಲಿ ತೀರ್ಮಾನಿಸಬೇಕಾಗಿರುತ್ತದೆ. ವಾರ್ಡ್ ಸಮಿತಿಗಳ ಕಾರ್ಯವೈಖರಿ ಕುರಿತಂತೆ ಕಾಲಕಾಲಕ್ಕೆ ಮಾನ್ಯ ಉಚ್ಚ ನ್ಯಾಯಾಲಯದ ಘನ ಪೀಠದ ಮುಂದೆ ಮಂಡಿಸಬೇಕಾಗಿರುವ ಹಿನ್ನೆಲೆಯಲ್ಲಿ ವಾರ್ಡ್ ಸಮಿತಿ ವತಿಯಿಂದ ಗುಂಡಿರಹಿತ ರಸ್ತೆಗಳ ಹಾಗೂ ಇನ್ನಿತರೆ ಅಗತ್ಯ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಪರಿಶೀಲನೆ ನಡೆಸುವುದು ಕಡ್ಡಾಯವಾಗಿರುತ್ತದೆ. ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ರಸ್ತೆ ಗುಂಡಿಗಳ ಬಗ್ಗೆ, ರಸ್ತೆ ದುರಸ್ತಿ ಹಾಗೂ ರಸ್ತೆ ಗುಂಡಿಗಳನ್ನು ಪತ್ತೆ ಹಚ್ಚಿ ಸರಿಪಡಿಸುವ ವಿಷಯವನ್ನು ಸಭೆಯಅಗ್ರ ವಿಷಯವಾಗಿ ಆಧ್ಯತೆ ಮೇರೆಗೆ ತೆಗೆದುಕೊಂಡು ಕ್ರಮವಹಿಸಬೇಕಾಗಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯವು ಸೂಚಿಸಿರುವಂತೆ ಕೆ.ಎಂ.ಸಿ.ಕಾಯ್ದೆ ಕಲಂ 13(ಹೆಚ್) ಹಾಗೂ 289ರಂತೆ ಕ್ರಮವಹಿಸಬೇಕಾಗಿರುವುದು ಕಡ್ಡಾಯವಾಗಿರುತ್ತದೆ.ಆದ್ದರಿಂದ ಸದರಿ ವಿಷಯವನ್ನು ಅತ್ಯಂತ ಗಂಭೀರವೆಂದು ಪರಿಗಣಿಸಿ, ನಿಯಮಾನುಸಾರ ಕೂಡಲೇ ಪ್ರತಿ ಮಾಹೆಯಾನ ವಾರ್ಡ್ ಸಮಿತಿ ಸಭೆಗಳನ್ನು ನಡೆಸಲು ಸೂಚಿಸಿದೆ.ತಪ್ಪಿದ್ದಲ್ಲಿ ಘನ ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗಲಿದ್ದು, ಮುಂದಿನ ಆಗುಹೋಗುಗಳಿಗೆ ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿಗಳ ಕಾರ್ಯದರ್ಶಿಯವರನ್ನೇ ನೇರವಾಗಿಜವಾಬ್ದಾರರನ್ನಾಗಿಸಲಾಗುವುದೆಂದು ತಿಳುವಳಿಕೆ ಪತ್ರ ಮುಖಾಂತರ ಮಾನ್ಯ ಆಯುಕ್ತರು ಸೂಚಿಸಿರುತ್ತಾರೆ.

ಪು.ತಿ.ನೋ. . . .

Office of the IT Advisor
Bruhat Bangalore Mahanagara Palike
No. 875
Date 18/3/2020.

ಮುಂದುವರೆದಂತೆ, ವಾರ್ಡ್ ಸಮಿತಿಗಳ ಕಾರ್ಯದರ್ಶಿಯವರು ಇದುವರೆಗೂ ವಾರ್ಡ್ ಸಮಿತಿ ಸಭೆಯಲ್ಲಿ ವಾರ್ಡ್ ಸಮಿತಿಗಳ ಕಾರ್ಯವೈಖರಿ ಕುರಿತಂತೆ ಕಾಲಕಾಲಕ್ಕೆ, ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಗಳಿಗೆ ಆದ್ಯತೆ ನೀಡುವುದು ಹಾಗೂ ಪರಿಶೀಲಿಸುವುದು, ವಸ್ತುಸ್ಥಿತಿ ವರದಿಯನ್ನು ಸಹ ಪರಿಶೀಲಿಸಿಕೊಂಡು ವಾರ್ಡ್ ಸಮಿತಿಯಲ್ಲಿ ತೀರ್ಮಾನಿಸಿರುವ ಸಭಾ ನಡವಳಿಯನ್ನು ಮಾಹಿತಿ ತಂತ್ರಜ್ಞಾನ ಕಛೇರಿಗೆ ಸಲ್ಲಿಸಿ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡದೇ ಇರುವುದು ಕಂಡುಬಂದಿರುತ್ತದೆ.

ಆದ್ದರಿಂದ, ಕೆ.ಎಂ.ಸಿ. ಕಾಯ್ದೆಯಂತೆ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ವಾರ್ಡ್ ಸಮಿತಿ ಸಭೆಯಲ್ಲಿ ವಾರ್ಡ್ ಸಮಿತಿಗಳ ಕಾರ್ಯವೈಖರಿ ಕುರಿತಂತೆ ಕಾಲಕಾಲಕ್ಕೆ, ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಗಳಿಗೆ ಆದ್ಯತೆ ನೀಡುವುದು, ವಸ್ತುಸ್ಥಿತಿ ವರದಿಯನ್ನು ಸಹ ಪರಿಶೀಲಿಸಿಕೊಂಡು ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ಸಭಾ ನಡವಳಿಯನ್ನು ಮಾಹಿತಿ ತಂತ್ರಜ್ಞಾನ ಕಛೇರಿಗೆ ಸಲ್ಲಿಸಿ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಿದೆ.

<u>ಸದರಿ ವಿಷಯವನ್ನು ಅತ್ಯಂತ ಗಂಭೀರವೆಂದು ಪರಿಗಣಿಸತಕ್ಕದ್ದು.</u>

ವಿಶೇಷ ಆಯುಕ್ತರು(ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

<u>ಪ್ರತಿಯನ್ನು:</u>

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
3. ಮಾನ್ಯಆಯುಕ್ತರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಆಡಳಿತ ಪಕ್ಷದ ನಾಯಕರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿದೆ
5. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಜೆ.ಡಿ.(ಎಸ್) ಪಕ್ಷದ ನಾಯಕರುಗಳ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿದೆ.
6. ವಾರ್ಡ್ ಸಮಿತಿಯಅಧ್ಯಕ್ಷರ ಗಮನಕ್ಕೆಸಲ್ಲಿಸಿದೆ.
7. ವಾರ್ಡ್ ಸಮಿತಿಗಳ ಕಾರ್ಯದರ್ಶಿಯವರಿಗೆ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
8. ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ವಿಶೇಷ ಆಯುಕ್ತರು (ಯೋಜನೆ/(ಹಣಕಾಸು)/(ಕಂದಾಯ) ರವರುಗಳಿಗೆ ಕಳುಹಿಸಿದೆ.
10. ಕೌನ್ಸಿಲ್ ಕಾರ್ಯದರ್ಶಿರವರಿಗೆ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
11. ಪ್ರಧಾನಅಭಿಯಂತರರಿಗೆ ಮುಂದಿನ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
12. ಕಛೇರಿಗೆಕಡತಕ್ಕೆ.
13. ಮಾಹಿತಿ ತಂತ್ರಜ್ಞಾನ ಸಲಹೆಗಾರರ ಕಛೇರಿಗೆ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ